# ಗೃಹಸ್ಥ ಧರ್ಮದಲ್ಲಿ ಆಧ್ಯಾತ್ಮಿಕತೆ – ಮಹಿಳೆಯ ಪಾತ್ರ

**ಸ್ವರ್ಣಗೌರಿ**

ಗೃಹಸ್ಥ ಜೀವನದಲ್ಲಿ ಗೃಹಿಣಿಯಾದವಳ ಪಾತ್ರ ಅತ್ಯಂತ ಹಿರಿದು. ಕೌಟುಂಬಿಕ ಜೀವನದಲ್ಲಿ ಆಧ್ಯಾತ್ಮವನ್ನು ಆಚರಿಸುವಲ್ಲಿ ಮಹಿಳೆಯ ಮಹತ್ವವೆಂತಹದು ಎಂಬ ವಿಷಯವಾಗಿ ಬರೆದಿರುವ ಲೇಖಕಿ, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಅನೇಕ ಲೇಖನಗಳನ್ನು ಬರೆದಿರುವ ಅವರು ಕೆಲವು ಗ್ರಂಥಗಳನ್ನೂ ರಚಿಸಿದ್ದಾರೆ.

ಹಿಂದೂಧರ್ಮವು ಮಾನವನ ಮುಂದೆ ಜೀವನ ನಡೆಸುವ ಎರಡು ರಾಜಮಾರ್ಗಗಳನ್ನು ಇರಿಸಿದೆ; ಒಂದು ಪ್ರವೃತ್ತಿ ಮಾರ್ಗ — ಎಂದರೆ ಗೃಹಸ್ಥರು ನಡೆಸುವ ಸಕ್ರಿಯ ಜೀವನ, ಇನ್ನೊಂದು ನಿವೃತ್ತಿಮಾರ್ಗ — ಸಂನ್ಯಾಸಿಗಳು ನಡೆಸುವ ವಿರಕ್ತ ಜೀವನ. ಪ್ರಾಮಾಣಿಕವಾಗಿ ಅನುಸರಿಸಿದ್ದೇ ಆದರೆ, ಎರಡೂ ದಾರಿಗಳು ಮಾನವನನ್ನು ಮುಕ್ತಿಯೆಂಬ ಒಂದೇ ಅತ್ಯುನ್ನತ ಗುರಿಗೆ ಒಯ್ಯುತ್ತವೆ. ಶೇಕಡ ತೊಂಭತ್ತೊಂಭತ್ತಕ್ಕಿಂತಲೂ ಅಧಿಕ ಜನ ಪ್ರವೃತ್ತಿಮಾರ್ಗವನ್ನೇ ಅನುಸರಿಸುವುದರಿಂದ ಗೃಹಸ್ಥ ಧರ್ಮವನ್ನು ಸರಿಯಾಗಿ ಪಾಲಿಸುವುದು ಪ್ರತಿಯೊಬ್ಬ ಗೃಹಸ್ಥನ ಆದ್ಯ ಕರ್ತವ್ಯ. ಏಕೆಂದರೆ ಸುವ್ಯವಸ್ಥಿತ ಸಮಾಜದ ಸುಭದ್ರ ಬುನಾದಿಗೆ ಕುಟುಂಬ ಪದ್ಧತಿಯೇ ಮೂಲ. ಈ ಪದ್ಧತಿಯಲ್ಲಿನ ಬಿರುಕು ಸಮಾಜದ ಕುಸಿತಕ್ಕೆ ಕಾರಣವಾಗುವುದು. ಸಮಾಜ ಕುಸಿದರೆ ದೇಶವು ಪ್ರಗತಿಯ ಪಥದಿಂದ ವಿಮುಖವಾಗುವುದು. ಹಿತಕರ ಸಮಾಜಕ್ಕೆ ಸಂತೋಷ, ನೆಮ್ಮದಿ, ತೃಪ್ತಿ, ಇತ್ಯಾದಿ ಅನೇಕಾನೇಕ ಸಕಾರಾತ್ಮಕ ಗುಣಗಳಿಂದ ಕೂಡಿದ ಕುಟುಂಬಗಳೇ ಆಧಾರ. ಹಿತಕರ ಸಮಾಜಗಳಿಂದ ದೇಶದ ಹಿತಸಾಧನೆಯಾಗುವುದರಲ್ಲಿ ಸಂಶಯವಿಲ್ಲ.

## ಗೃಹಿಣೀ ಗೃಹಮುಚ್ಯತೇ

'ಮಾತೃದೇವೋಭವ', 'ತಾಯಿಯೇ ಮೊದಲ ಗುರು', 'ಒಬ್ಬ ಸ್ತ್ರೀಗೆ ಶಿಕ್ಷಣ ದೊರೆತರೆ ಮನೆಮಂದಿಯೆಲ್ಲಾ ವಿದ್ಯಾವಂತರು ಆಗುವರು', 'ತಾಯಿಗಿಂತ ದೊಡ್ಡವರು ಈ ಪ್ರಪಂಚದಲ್ಲಿ ಇಲ್ಲ', 'ತೊಟ್ಟಿಲು ತೂಗುವ ಕೈ ಜಗತ್ತನ್ನು ಆಳಬಲ್ಲದು' ಇತ್ಯಾದಿ ಅನೇಕಾನೇಕ ನಾಣ್ನುಡಿಗಳು, ಶಾಸ್ತ್ರೋಕ್ತಿಗಳು, ಗಾದೆ ಮಾತುಗಳು ತಾಯಿ ಅಥವಾ ಗೃಹಲಕ್ಷ್ಮಿಯ ಹಿರಿಮೆಯನ್ನು ಸಾರಿ ಸಾರಿ ಹೇಳುತ್ತಿವೆ. 'ಗೃಹಿಣೀ ಗೃಹಮುಚ್ಯತೇ' ಎಂಬ ಮಾತಿದೆ. ಸಂಸ್ಕೃತದಲ್ಲಿ 'ಗೃಹ'ವೆಂದರೇನೆ ಗೃಹಿಣಿ ಎಂದರ್ಥ. ಅವಳ ಅಪಾರ ತ್ಯಾಗ-ಸೇವೆಯೇ ಮನೆಯ ಆಧಾರ. ಅವಳು ತನ್ನ ಕರ್ತವ್ಯವನ್ನು ನಿಭಾಯಿಸದಿದ್ದರೆ ಕೌಟುಂಬಿಕ ಜೀವನ ಸುಗಮವಾಗಿ ನಡೆಯದು. ಅದರ ಭದ್ರತೆ ನಾಶವಾಗುತ್ತದೆ. ಸಮಾಜದ ಸುಭದ್ರ ಅಡಿಪಾಯ ಕುಟುಂಬವೇ ಎಂಬುದನ್ನು ಮರೆಯದಿದ್ದಾಗ ಅವಳದು ಎಂತಹ ಗುರುತರವಾದ ಜವಾಬ್ದಾರಿ ಎಂಬುದು ತಿಳಿಯುತ್ತದೆ. ಗೃಹಿಣಿ ತನ್ನ ಮಕ್ಕಳಿಗೆ ಮಾತ್ರ ತಾಯಿಯಲ್ಲ, ಮನೆಯವರೆಲ್ಲರಿಗೂ ತಾಯಿ; ಎಲ್ಲರೂ, ಪತಿಯೂ ಕೂಡ, ಅವಳ ಮಾತೃವಾತ್ಸಲ್ಯದಲ್ಲಿ ಪಾಲ್ಗೊಳ್ಳುವರು. ಮನೆಯ ಪ್ರತಿಯೊಂದು ಕಾರ್ಯದ ಹಿಂದೆ ಅವಳ ಪ್ರೀತಿಯ ಬೆಂಬಲ ಇರಬೇಕು.

ಸಂಸಾರದಲ್ಲಿ ಸುಖ-ದುಃಖ, ಏರುಪೇರುಗಳು ಇದ್ದದ್ದೇ. ಇವೆಲ್ಲದರ ಮಧ್ಯೆ ಎಲ್ಲರೊಡನೆ ಹೊಂದಿಕೊಂಡು ಎಲ್ಲರಿಗೂ ಆನಂದವನ್ನು ನೀಡಲು ಪ್ರಯತ್ನಿಸುವುದು ಆ 'ತಾಯಿ'ಯ ವೈಶಿಷ್ಟ್ಯ. ಎಷ್ಟೋ ವಿರುದ್ಧ ಶಕ್ತಿಗಳ ನಡುವೆಯೂ ಹೋರಾಡುತ್ತ ಮನೆಯಲ್ಲಿ ಪ್ರೀತಿಯ ವಾತಾವರಣವನ್ನು ಕಲ್ಪಿಸಲು ನಿರಂತರ ಪ್ರಯತ್ನಿಸುವ, ಆ ಎರಡಕ್ಷರ ಪದದ ವ್ಯಕ್ತಿ, 'ತಾಯಿ'.

## ಮಾತೃತ್ವದ ಆದರ್ಶ

ಭಾರತೀಯ ಸಂಸ್ಕೃತಿಯನ್ವಯ ಮಹಿಳೆಯ ಪರಮೋಚ್ಚ ಸ್ಥಾನವೆಂದರೆ ಮಾತೃತ್ವದ ಆದರ್ಶ. ದೇವರನ್ನು ತಾಯಿ ಎಂದು ಕಾಣುವ ನಮ್ಮ ರಾಷ್ಟ್ರ, ಮಹಿಳೆಯಲ್ಲಿ ಸಕಲ ಗೌರವ ಮತ್ತು ಮಾಧುರ್ಯಗಳನ್ನು ಬೆಳೆಸಿಕೊಂಡಿದೆ. ತಾಯಿಯು ತಂದೆ ಅಥವಾ ಗುರುವಿಗಿಂತ ಅಧಿಕ ಗೌರವಕ್ಕೆ ಅರ್ಹಳೆಂದು 'ಮನುಸ್ಮೃತಿ' ಹೇಳುತ್ತದೆ.

**ಉಪಾಧ್ಯಾಯಾನ್ ದಶಾಚಾರ್ಯಃ ಆಚಾರ್ಯಾಣಾಂ ಶತಂ ಪಿತಾ ।**
**ಸಹಸ್ರಂ ತು ಪಿತೃನ್ ಮಾತಾ ಗೌರವೇಣಾತಿರಿಚ್ಯತೇ ॥**

'ಶಿಕ್ಷಕನಿಗಿಂತ ಹತ್ತುಪಟ್ಟು ಗುರುವೂ, ಗುರುವಿಗಿಂತ ನೂರುಪಟ್ಟು ತಂದೆಯೂ, ತಂದೆಗಿಂತ ಸಾವಿರಪಟ್ಟು ತಾಯಿಯೂ ಗೌರವಕ್ಕೆ ಪಾತ್ರಳಾಗಿರುತ್ತಾಳೆ' ಎಂದು ಸಾರುವ ಮನುಸ್ಮೃತಿಯ ತಾಯಿ, ಗುರು ಅಥವಾ ತಂದೆಗಿಂತ ಅಧಿಕ ಗೌರವಕ್ಕೆ ಪಾತ್ರಳೆಂದು ಸಾರುತ್ತಿದೆ.

ಸ್ತ್ರೀ ಜನಾಂಗವೆಲ್ಲವೂ ಜಗನ್ಮಾತೆಯ ರೂಪವೆಂದು ಹಿಂದೂ ಸಂಸ್ಕೃತಿಯ ನಂಬಿಕೆ. ಮಾತೃತ್ವದಲ್ಲಿ ಅಡಗಿರುವ ತನ್ನತನವನ್ನು ಮರೆಯುವ ಪ್ರೇಮ ಹಾಗೂ ಸಹಾನುಭೂತಿಗಳೇ ಮಾತೆಗೆ ಮಹಾಗೌರವವನ್ನು ನೀಡಿವೆ. ಪಾತಿವ್ರತ್ಯ ಮತ್ತು ಪರಿಶುದ್ಧತೆ, ನಿಸ್ವಾರ್ಥತೆ ಮತ್ತು ಸೇವೆ, ಸರಳತೆ ಮತ್ತು ಸೌಜನ್ಯ ಈ

ಆದರ್ಶಗಳನ್ನು ದೈವಿಕತೆಯ ದೃಷ್ಟಿಯಿಂದ ಬಹುತೇಕ ಮಹಿಳೆಯರು ಪಾಲಿಸಿಕೊಂಡು ಬಂದಿದ್ದಾರೆ. ಇವು ಅವಳ ಜೀವನದಲ್ಲಿ ಹಾಸುಹೊಕ್ಕಾಗಿವೆ. ಭಾರತೀಯ ಮಹಿಳೆ ತನ್ನ ಈ ಪರಂಪರೆಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ.

ಸ್ವಾಮಿ ವಿವೇಕಾನಂದರು ತಮ್ಮ ಸ್ವದೇಶ ಮಂತ್ರದಲ್ಲಿ, ''ನಮ್ಮ ಸ್ತ್ರೀಯರ ಆದರ್ಶ — ಸೀತಾ, ಸಾವಿತ್ರಿ , ದಮಯಂತಿಯರು ಎಂಬುದನ್ನು ಮರೆಯದಿರಿ'', ಎಂದು ಸಾರಿದ್ದಾರೆ. ಅವರ ಅಭಿಮತವೇನೆಂದರೆ, ಭರತಖಂಡದಲ್ಲಿ ಆದರ್ಶ ಮಹಿಳೆ ತಾಯಿ, ಮೊದಲೂ ತಾಯಿಯೇ, ಅನಂತರವೂ ತಾಯಿಯೇ; ಹಿಂದೂ ಮನಸ್ಸಿನಲ್ಲಿ ಮಹಿಳೆ ಎಂಬ ಶಬ್ದ ತಾಯ್ತನವನ್ನು ನೆನಪಿಗೆ ತರುವುದು; ಆದ್ದರಿಂದಲೇ ದೇವರನ್ನು ತಾಯಿ ಎಂದು ಕರೆಯುವರು. ಎಲ್ಲ ಜನಾಂಗಗಳೂ ಸ್ತ್ರೀಯರಿಗೆ ಯಥಾರ್ಥ ಗೌರವವನ್ನು ನೀಡುವುದು, ಯಾವ ದೇಶ ಅಥವಾ ಜನಾಂಗ ಸ್ತ್ರೀಯರಿಗೆ ಗೌರವ ಕೊಟ್ಟಿಲ್ಲವೋ ಅದು ಖಂಡಿತವಾಗಿ ಪ್ರಗತಿ ಹೊಂದಿಲ್ಲ; ಮುಂದೆ ಹೊಂದುವುದೂ ಇಲ್ಲವೆಂದು ಸ್ವಾಮೀಜಿ ಮುಕ್ತಕಂಠದಿಂದ ಸಾರಿದರು.

ಪುರುಷನಂತೆ ಸ್ತ್ರೀಯೂ ಭವಿಷ್ಯವುಳ್ಳ ವ್ಯಕ್ತಿಯೆಂದು ನಮ್ಮ ಭಾರತೀಯ ಶಾಸ್ತ್ರಗಳು ಸಾರುತ್ತವೆ. ಈ ಭವಿಷ್ಯದ ಶೋಧನೆಯೇ ಸ್ತ್ರೀಯನ್ನು ಅಭ್ಯುದಯ ಮತ್ತು ನಿಃಶ್ರೇಯಸಗಳ ಅಂದರೆ ಲೌಕಿಕ ಉನ್ನತಿ ಮತ್ತು ಆಧ್ಯಾತ್ಮಿಕ ಸಾಧನೆಗಳ ಸಾಧಕರನ್ನಾಗಿ ರೂಪುಗೊಳಿಸಿದೆ. ಸ್ತ್ರೀ ಎಂದರೆ ನಾಗರಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಪುರುಷನೊಡನೆ ಸಮಾನ ಸ್ಥಾನಮಾನ ಪಡೆದವಳೆಂಬುದನ್ನು ನಮ್ಮ ಚರಿತ್ರೆಯಲ್ಲಿ ಕಾಣುತ್ತೇವೆ. ಆದರೆ ಜೀವನದ ಪರಮಗುರಿಯಾದ ನಿಃಶ್ರೇಯಸದ ಸಾಧನೆಯಲ್ಲಿ ಪುರುಷ-ಸ್ತ್ರೀ ಇಬ್ಬರೂ ಏಕಾಂಗಿಯಾಗಿಯೇ ಮುಂದುವರಿಯಬೇಕಾಗುತ್ತದೆ.

### ಕುಟುಂಬದ ಪ್ರಾಮುಖ್ಯತೆ

ಕೇವಲ ವ್ಯಕ್ತಿಗಳ ಸಮೂಹ ಕುಟುಂಬವಾಗಲಾರದು. ಪತಿ-ಪತ್ನಿಯರ ಪ್ರೀತಿಯ ಒಡನಾಟದಿಂದ 'ಗೃಹ'ವೆನಿಸಿಕೊಳ್ಳುತ್ತದೆ. 'ದಂಪತಿ' ಎನ್ನುವ ವೈದಿಕ ಪದದ ಅರ್ಥವೇ 'ಪತಿಪತ್ನಿಯರು ಸೇರಿ' ಎಂಬುದಾಗಿ. ಪದ ವ್ಯುತ್ಪತ್ತಿಯ ಅರ್ಥದ ಅನುಸಾರ 'ದಂಪತಿ' ಎಂದರೆ 'ಮನೆಯ ಜಂಟಿ ಮಾಲೀಕರು' ಎಂಬುದಾಗಿ. ಜ್ಞಾನಸಂಪಾದನೆಯೇ ಇರಲಿ, ಧಾರ್ಮಿಕ ವಿಧಿಗಳ ಆಚರಣೆಯೇ ಆಗಿರಲಿ, ಯುದ್ಧರಂಗವೇ ಆಗಿರಲಿ, ರಾಜಕೀಯವೇ ಆಗಿರಲಿ ಎಲ್ಲ ಕ್ಷೇತ್ರಗಳಲ್ಲಿ ಸ್ತ್ರೀಯು ಪುರುಷನ ಸಹಚರಿಯಾಗಿರುವುದನ್ನು ನಾವು ಕಾಣುತ್ತೇವೆ. ಸ್ತ್ರೀಪುರುಷರೆಂದರೆ ಒಂದೇ ಭಗವಂತನ ಎರಡು ಅರ್ಧಾಂಗಗಳೆಂದೂ, ಪರಸ್ಪರ ಪೂರಕವೆಂದೂ, ಒಬ್ಬರಿಲ್ಲದೆ ಇನ್ನೊಬ್ಬರು ಅಪೂರ್ಣರೆಂದು ಉಪನಿಷತ್ತುಗಳು ಪ್ರತಿಪಾದಿಸಿವೆ. ನಿತ್ಯಶುದ್ಧ, ಪರಿಪೂರ್ಣ ಮತ್ತು ಸ್ವತಂತ್ರನಾಗಿರುವ ಲಿಂಗರಹಿತ ಆತ್ಮನೇ ಸ್ತ್ರೀಪುರುಷರ ನಿಜಸ್ವರೂಪ ಎನ್ನುತ್ತವೆ ಉಪನಿಷತ್ತುಗಳು.

ಸಂಸ್ಕೃತದಲ್ಲಿ ಒಂದು ಶ್ಲೋಕವಿದೆ:

**ದುಷ್ಟಾ ಭಾರ್ಯಾ ಶಠಂ ಮಿತ್ರಂ ಭೃತ್ಯಶ್ಚೋತ್ತರದಾಯಕಃ ।**
**ಸಸರ್ಪೇ ಚ ಗೃಹೇ ವಾಸೋ ಮೃತ್ಯುರೇವ ನ ಸಂಶಯಃ ॥**

'ಪತ್ನಿ ದುಷ್ಟ ಪ್ರವೃತ್ತಿಯವಳು; ಮಿತ್ರ ವಂಚಕ; ಆಳುಗಳು ಹೇಳಿದ ಮಾತು ಕೇಳದೆ ಎದುರು ಉತ್ತರ ಕೊಡುತ್ತಾರೆ; ಇಷ್ಟೂ ಸಾಲದೆಂಬಂತೆ ಮನೆಯಲ್ಲಿ ಸರ್ಪ — ಇಂಥ ಮನೆಯಲ್ಲಿ ವಾಸಿಸುವುದೇ ಮೃತ್ಯುವೆಂಬುದರಲ್ಲಿ ಸಂಶಯವಿಲ್ಲ.'

''ಒಬ್ಬ ವ್ಯಕ್ತಿ ಕುಟುಂಬವನ್ನು ಏಕೆ ಸ್ವೀಕರಿಸುತ್ತಾನೆ? ಒಂಟಿಯಾಗಿ ಏಕೆ ಜೀವಿಸಬಾರದು? ಸಂಸಾರ ತ್ಯಜಿಸಿದರೂ ಮಠ ಸೇರಿ ಸಂನ್ಯಾಸಿಗಳು ಕುಟುಂಬದಲ್ಲಿ ವಾಸಿಸುತ್ತಾರೆ. ಕೆಲವರ ಹೊರತು ಎಲ್ಲರೂ ಜನಸಂಪರ್ಕ ಬಯಸುತ್ತಾರೆ. ಜಗಳವಾಡುವುದಕ್ಕಾದರೂ ಇನ್ನೊಬ್ಬರು ಬೇಕು! ಪ್ರೀತಿಪೂರ್ಣವಾದ ಸಂಬಂಧ ಸಾಧ್ಯವಾಗದಿದ್ದರೆ ದ್ವೇಷ ಅಸೂಯೆಗಳ ಮೂಲಕವಾಗಿಯಾದರೂ ಇತರರೊಡನೆ ಸಂಬಂಧ ಇಟ್ಟುಕೊಳ್ಳುತ್ತಾನೆ. ದ್ವೇಷ ನಿಜವಾಗಿಯೂ ಪ್ರೀತಿಯ ವಿಕೃತರೂಪ ಅಷ್ಟೆ.'' *('ಪರಿಪೂರ್ಣ ವ್ಯಕ್ತಿತ್ವ' – ಪು. ೫೦)*

ಸುರಕ್ಷಿತ ದಂಪತಿಗಳ ರೋಚಕ ಕಥೆಯೊಂದಿದೆ. ಇಬ್ಬರೂ ಒಂದೇ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಇಬ್ಬರಲ್ಲಿ ಮತಭೇದವಿತ್ತು. ಒಮ್ಮೆ ಅವರಲ್ಲಿ ವಾಗ್ಯುದ್ಧ ವಿಕೋಪಕ್ಕೆ ಹೋದಾಗ ಗಂಡ ಹೆಂಡತಿಯ ಕೆನ್ನೆಗೆ ಬಾರಿಸಿದ, ಅವಳು ಕುಪಿತಳಾಗಿ ತವರಿಗೆ ತೆರಳಿದಳು. ಕೆಲವು ಕಾಲದ ನಂತರ ಗಂಡನಿಗೆ ವಿಪರೀತ ವಿಷಮಜ್ವರದ ಬಾಧೆಯಾಗಿ ಹಾಸಿಗೆ ಹಿಡಿದಿದ್ದಾನೆಂಬ ಸುದ್ದಿ ಅವಳಿಗೆ ತಿಳಿಯಿತು. ಏನು ಮಾಡುವುದು ಎಂದಾಕೆಗೆ ತೋಚದಾಯಿತು. ಅವಳು ಶ್ರೀ ಬ್ರಹ್ಮಚೈತನ್ಯ ಮಹಾರಾಜರನ್ನು ಕಂಡು ತನ್ನ ಕಥೆಯನ್ನೆಲ್ಲಾ ಹೇಳಿದಳು. ಅವರು ಎಲ್ಲವನ್ನೂ ತಾಳ್ಮೆಯಿಂದ ಕೇಳಿಸಿಕೊಂಡು ಹೀಗೆಂದು ಬೋಧಿಸಿದರು: ''ಸ್ತ್ರೀ ಹಾಗೂ ಪುರುಷರು ಒಂದೇ ರಥದ ಎರಡು ಚಕ್ರಗಳಿದ್ದಂತೆ, ಎರಡೂ ಒಂದೇ ದಿಕ್ಕಿನೆಡೆ ನಡೆಯಬೇಕು. ಎರಡೂ ಬೇರೆ ಬೇರೆ ದಿಕ್ಕಿನೆಡೆ ಎಳೆದಾಡಿದರೆ ರಥಕ್ಕೆ ದುರ್ದೆಶೆಯಾಗುತ್ತದೆ. ಪ್ರಪಂಚವೇ ಒಂದು ಆಟ, ಅದರಲ್ಲಿ ಭೇದ ಸ್ವಾಭಾವಿಕ. ಪುರುಷ ಶೌರ್ಯ ಹಾಗೂ ಔದಾರ್ಯದ ಮೂರ್ತಿಯಾಗಬೇಕು. ಸ್ತ್ರೀಯಲ್ಲಿ ಸಹನೆ ಮತ್ತು ಅನನ್ಯ ಶರಣಾಗತಿಗಳು ಮೈದಾಳಬೇಕು. ಸಂಸಾರದಲ್ಲಿ ಸೋಲುವುದು ಸ್ತ್ರೀಯ ಸಹನಶೀಲತೆಯ ಪರೀಕ್ಷೆ. ಜಗತ್ತು ಒಂದು ನಾಟಕ. ನಿಮ್ಮ ಪಾತ್ರವನ್ನು ನೀವು ಸರಿಯಾಗಿ ನಿಭಾಯಿಸಬೇಕು.'' ''ಗುರುಗಳೇ, ಈಗ ನಾನೇನು ಮಾಡಲಿ ಹೇಳಿರಿ?'' ಎಂದವಳು ಮರು ಪ್ರಶ್ನಿಸಿದಾಗ ಗುರುಗಳು, ''ಈ ಕೂಡಲೇ ನೀನು ನಿಮ್ಮ ಯಜಮಾನರಿರುವಲ್ಲಿಗೆ ಹೋಗು. ಹಿಂದೆ ಏನೂ ನಡೆದಿಲ್ಲವೆನ್ನುವಂತೆ ಭಾವಿಸಿ ಅವರ ಶುಶ್ರೂಷೆ ಮಾಡು, ಪ್ರತಿದಿನ ಬೆಳಿಗ್ಗೆ ಅವರಿಗೆ ನಮಸ್ಕರಿಸು'' ಎಂದರು. ಗುರುಗಳು ಉಪದೇಶಿ

ಸಿದಂತೆ ಆಕೆ ಪತಿಯ ಬಳಿ ಹೋಗಿ ಸೇವೆ ಮಾಡಿದಳು. ಪತಿಯ ಕಾಯಿಲೆ ಗುಣಮುಖವಾಗಿದ್ದಲ್ಲದೆ ಮನವೂ ಪರಿವರ್ತನೆಯಾಯಿತು. ಅವಳು ನಮಸ್ಕರಿಸುವಾಗ ಅವರಿಗೆ ಅಳುವೇ ಬಂತು. ಬಹಳ ಪಶ್ಚಾತ್ತಾಪವಾಗಿತ್ತು. ''ನಿನ್ನ ಬದಲಾವಣೆ ಕಂಡರೆ ಯಾರೋ ಮಹಾತ್ಮರು ನಿನಗೆ ಹೀಗೆ ವರ್ತಿಸಲು ಹೇಳಿರಬೇಕು. ಇನ್ನು ಮುಂದೆ ನನ್ನಿಂದ ಇಂಥ ತಪ್ಪು ಆಗದು'' ಎಂದು ವಚನ ಕೊಡುತ್ತೇನೆ ಎಂದನಂತೆ ಪತಿ. ಅನಂತರ ಅವರಿಗೆ ಒಂದು ಗಂಡು ಮಗುವಾಯಿತು. ಇಬ್ಬರೂ ಸಂತರ ದರ್ಶನ ಪಡೆದು ಕೃತಕೃತ್ಯರಾದರು. *('ಬದುಕಲು ಕಲಿಯಿರಿ' ಸಂಯುಕ್ತ ಆವೃತ್ತಿ,ಪು .೨೮೯)*

''ಒಬ್ಬ ಪುರುಷ ಕೆಟ್ಟ ಮಾರ್ಗದಲ್ಲಿ ಎಷ್ಟೇ ಮುಂದುವರಿದಿದ್ದರೂ, ಸತಿ ಪ್ರೇಮಪೂರ್ವಕವಾಗಿ ಆತನನ್ನು ಪರಿವರ್ತಿಸದಿರುವ ಸಂಗತಿ ಅಪರೂಪ'' ಎನ್ನುತ್ತಾರೆ ಸ್ವಾಮೀಜಿ.

## ತಾಯ ವಾತ್ಸಲ್ಯದ ಮಹತ್ವ

ಮಕ್ಕಳ ಸರಿಯಾದ ಬೆಳವಣಿಗೆಗೆ ತಾಯಿಯ ಪ್ರೀತಿ ವಾತ್ಸಲ್ಯಗಳು ಅತ್ಯಂತ ಆವಶ್ಯಕ ಎಂಬುದು ಅನುಭವ ಹಾಗೂ ಸಂಶೋಧನೆಗಳ ಮೂಲಕ ಸಾಬೀತಾಗಿದೆ. 'ಸಾಂಕ್ರಾಮಿಕ ರೋಗದಿಂದ, ಹಸಿವೆಯಿಂದ, ಅಪೋಷಕ ಆಹಾರದಿಂದ ಮಕ್ಕಳು ದುರ್ಬಲರಾಗಿ ಸಾಯುವಂತೆ, ತಾಯಿಯ ಒಲವನ್ನೇ ಕಂಡರಿಯದ ಮಕ್ಕಳು ಬಹಳ ಬೇಗನೆ ರೋಗಿಷ್ಠರೂ, ದುರ್ಬಲರೂ ಆಗಿ ಸಾಯುತ್ತಾರೆ ಎಂದು ಈ ಕ್ಷೇತ್ರದಲ್ಲಿ ಸಂಶೋಧನೆ ನಡೆಸಿದ ಡಾ. ರೀನೆ ಎ. ಸ್ಪಿಟ್ಸ್ ಹೇಳುತ್ತಾರೆ. ಶೈಶವ, ಬಾಲ್ಯಗಳಲ್ಲಿ ತಂದೆತಾಯಂದಿರ ಪರಿಶುದ್ಧ ಪ್ರೀತಿಯನ್ನು ಕಂಡರಿಯದ ಮಕ್ಕಳು ದುಷ್ಟರೂ, ಭ್ರಷ್ಟರೂ, ಕ್ರೂರಿಗಳೂ ಆಗುತ್ತಾರೆ ಎಂಬುದು ತಜ್ಞರ ಅಭಿಪ್ರಾಯ. ಪೋಷಕರು ನೀಡಲಾಗದ ಪ್ರೀತಿಯ ಕೊರತೆಯನ್ನು ಶಿಕ್ಷಕರೊಬ್ಬರು ನೀಗಿದ ಸ್ವಾರಸ್ಯಕರ ಘಟನೆಯೊಂದು ಬೆಳಕಿಗೆ ಬಂದಿದೆ.

ಅಮೆರಿಕೆಯ ಬಾಲ್ಟಿಮೋರ್‌ನಲ್ಲಿಯ ಸಮಾಜಶಾಸ್ತ್ರದ ಪ್ರಾಧ್ಯಾಪಕರೊಬ್ಬರು ತಮ್ಮ ವಿದ್ಯಾರ್ಥಿಗಳಿಗೆ ಕೊಳಚೆ ಪ್ರದೇಶದಲ್ಲಿ ವಾಸಿಸುವ ಎಳೆಯ ಮಕ್ಕಳನ್ನು ಕುರಿತು ಅಭ್ಯಾಸ ಮಾಡಲು ಹೇಳಿದರಂತೆ. ಅವರುಗಳು ೨೦೦ ಎಳೆಯರನ್ನು ಸಂದರ್ಶಿಸಿ ಮಾಹಿತಿ ಕಲೆ ಹಾಕಿದರಂತೆ. ಮಕ್ಕಳು ವಾಸಿಸುತ್ತಿದ್ದ ವಾತಾವರಣ ಭಯಾನಕವಾಗಿತ್ತು, ಅಸಹ್ಯವಾಗಿತ್ತು. ಅವರಲ್ಲಿ ಶೇಕಡಾ ೯೦ರಷ್ಟು ಮಕ್ಕಳು ದುಷ್ಟರಾಗಿ ಬೆಳೆದು ಜೈಲುವಾಸ ಮಾಡುವರೆಂದು ಭವಿಷ್ಯ ನುಡಿಯಲಾಗಿತ್ತು. ಇಪ್ಪತ್ತೈದು ವರ್ಷಗಳ ನಂತರ ಅದೇ ಪ್ರಾಧ್ಯಾಪಕರು ತಮ್ಮ ವಿದ್ಯಾರ್ಥಿಗಳ ಇನ್ನೊಂದು ತಂಡವನ್ನು ಆ ಕೊಳಚೆ ಪ್ರದೇಶಕ್ಕೆ ಕಳುಹಿಸಿದರು. ಹಿಂದೆ ತಮ್ಮ ವಿದ್ಯಾರ್ಥಿಗಳು ಮಾಡಿದ ಅಭ್ಯಾಸದ ಪರಿಣಾಮಗಳನ್ನು ನೋಡಲು ಅವರು ಉತ್ಸುಕರಾಗಿದ್ದರು. ಅವರಲ್ಲಿ ೯೦ ಜನರನ್ನು ಸಂಪರ್ಕಿಸಲು ಸಾಧ್ಯವಾಗಿತ್ತು. ಹಿಂದಿನವರು ನುಡಿದ ಭವಿಷ್ಯ ಸುಳ್ಳಾಗಿತ್ತು. ಅವರೆಲ್ಲರೂ ಸಭ್ಯ ನಾಗರಿಕರಾಗಿದ್ದರು. ಇವರ ಪರಿವರ್ತನೆಯ ಗುಟ್ಟೇನು?

ಹೊಸ ಅಧ್ಯಯನದಿಂದ ತಿಳಿದ ವಿಷಯ ಹೀಗಿತ್ತು: ಆ ಕೊಳಚೆ ಪ್ರದೇಶದಲ್ಲಿದ್ದ ಶಾಲೆಯಲ್ಲಿ ಶೀಲಾ ರೂರ್ಕೆ ಎಂಬ ಅಧ್ಯಾಪಕಿಯಿದ್ದಳು. ಮಕ್ಕಳ ಮೇಲೆ ಅವಳ ಪ್ರಭಾವ ಬಹಳ ಆಗಿತ್ತು ಎಂಬುದು ಕಂಡುಬಂತು. ಆ ಅಧ್ಯಾಪಕಿ ನಿವೃತ್ತಳಾಗಿ ಬಹಳ ವರ್ಷವಾಗಿತ್ತು. ಈ ಅಧ್ಯಾಪಕರು ಅವಳನ್ನು ಹುಡುಕಲು ತೊಡಗಿದರು. ಅವಳನ್ನೂ ಕಂಡು ಅವಳ ಸಂದರ್ಶನ ಪಡೆದರು. 'ಈ ಕೊಳಚೆ ಪ್ರದೇಶದ ಮಕ್ಕಳಿಗೆ ನೀವು ಹೇಗೆ ಸ್ಫೂರ್ತಿ ನೀಡಿದಿರಿ? ನಿಮ್ಮ ಯಾವ ಉಪಾಯದಿಂದ ಇವರೆಲ್ಲ ಸಭ್ಯ ನಾಗರಿಕರಾದರು?' ಎಂದು ಕೇಳಿದಾಗ ಆಕೆ ವಿನಮ್ರಳಾಗಿ ಉತ್ತರಿಸಿದಳಂತೆ, 'ನನಗೆ ಯಾವ ಉಪಾಯವೂ ಗೊತ್ತಿಲ್ಲ. ನಾನು ಆ ಶಾಲೆಯ ಅಧ್ಯಾಪಕಿಯಾಗಿದ್ದವಷ್ಟು ಕಾಲ ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಅತ್ಯಂತ ಪ್ರೀತಿಯಿಂದ ನೋಡಿಕೊಂಡೆ' ಎಂದು. *(ಬದುಕಲು ಕಲಿಯಿರಿ' ಸಂಯುಕ್ತ ಆವೃತ್ತಿ,ಪು . ೨೯೦)*

''ಪ್ರೀತಿ ಪರಿವರ್ತನೆಗೆ ಪ್ರೇರಕವಾಗಬಲ್ಲದು. ಪ್ರೀತಿ ಪಡೆದವನೇ ಪ್ರೀತಿಯ ಮಹಿಮೆ ತಿಳಿಯಬಲ್ಲ. ಆತನೇ ಪ್ರೀತಿಯನ್ನು ಇತರರಿಗೆ ನೀಡಬಲ್ಲ.''

''ಜನರೇನೊ ಪ್ರೀತಿಸುವುದು ಅತ್ಯಂತ ಸುಲಭ ಕಾರ್ಯವೆಂದು ನಂಬಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿ ಪ್ರೀತಿಸುವ ಸಾಮರ್ಥ್ಯವಿದ್ದರೂ ನಿಜವಾಗಿ ಪ್ರೀತಿಸುವುದು ಒಂದು ಅಸಾಮಾನ್ಯ ಸಿದ್ಧಿಯೇ ಸರಿ'' ಎಂದು ಎರಿಕ್ ಫ್ರಾಂ ಹೇಳುತ್ತಾರೆ.

'ನಾನು ಯಾರಿಗೂ ಬೇಡವಾದವನು' ಎಂಬ ಭಾವನೆಯೇ ಕೆಟ್ಟದಾದ ರೋಗ. ''ಕುಷ್ಠರೋಗಕ್ಕೆ ನಾವು ಔಷಧ ಕಂಡು ಹಿಡಿದಿದ್ದೇವೆ, ಕ್ಷಯರೋಗಕ್ಕೆ ಔಷಧಿ ಇದೆ. ಆದರೆ ಪ್ರೀತಿಯನ್ನು ಕಂಡರಿಯದ ಈ ಕೆಟ್ಟ ರೋಗಕ್ಕೆ ಔಷಧಿ ಎಲ್ಲಿದೆ?'' ಎನ್ನುತ್ತಾರೆ ಮದರ್ ಥೆರೇಸಾ.

''ಜಗತ್ತೇ ಪರಿಶುದ್ಧ ಪ್ರೀತಿಗಾಗಿ ಆತುರದಿಂದ ಹಾತೊರೆಯುತ್ತಿದೆ. ಪ್ರತಿಫಲವನ್ನು ಅಪೇಕ್ಷಿಸದೆ ನಾವು ಅದನ್ನು ಹಂಚಬೇಕು'' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

## ತಾಯಿಯ ಆಧ್ಯಾತ್ಮಿಕ ಪಾತ್ರ

ಹಿಂದೂ ಕುಟುಂಬದಲ್ಲಿ ತಾಯಿಯೇ ದೇವತೆ, ಮನೆಯ ಮೂಲಸ್ತಂಭ. ಈ ಪ್ರಪಂಚದಲ್ಲಿ ನಿಜವಾದ ಪ್ರೀತಿಯನ್ನು, ಅತ್ಯಂತ ನಿಸ್ವಾರ್ಥ ಪ್ರೀತಿಯನ್ನು ಕಾಣುವುದು ತಾಯಿಯಲ್ಲಿ ಮಾತ್ರವೇ. ಎಲ್ಲ ದುಃಖವನ್ನು ಅನುಭವಿಸಿದರೂ ಯಾವಾಗಲೂ ಪ್ರೀತಿಸುವುದು ಅವಳ ಸ್ವಭಾವ. ''ತಾಯಿಯ ಪ್ರೇಮವಲ್ಲದೆ ಮತ್ತಾವುದು ಭಗವತ್ಪ್ರೇಮವನ್ನು ಪ್ರತಿನಿಧಿಸಬಲ್ಲದು?'' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

ಸ್ವಾಮಿ ವಿವೇಕಾನಂದರನ್ನು ನಿರ್ಮಿಸುವಲ್ಲಿ ಭುವನೇಶ್ವರಿ ದೇವಿಯ ಪಾತ್ರವಿದೆ; ಶಿವಾಜಿಯನ್ನು ರೂಪಿಸುವಲ್ಲಿ ಜೀಜಾ ಬಾಯಿ, ಭಗತ್‌ಸಿಂಗ್‌ರಂತಹ ಶ್ರೇಷ್ಠ ದೇಶಪ್ರೇಮಿಯ ಕೊಡುಗೆ ಯಲ್ಲಿ ತಾಯಿ ವಿದ್ಯಾವತಿಯ ತ್ಯಾಗವಿದೆ. ಶ್ರೇಷ್ಠ ವ್ಯಕ್ತಿಗಳನ್ನು ಶಿಲ್ಪಿಸುವಲ್ಲಿ ತಾಯಂದಿರ ಪಾತ್ರ ಹಿರಿದು, ಮಹತ್ತರವಾದದು. ಸ್ವಾಮೀಜಿ ತಮ್ಮ ತಾಯಿಯನ್ನು ಕುರಿತು ಹೀಗೆನ್ನು ತ್ತಾರೆ:

''ನಾನು ಹುಟ್ಟುವುದಕ್ಕೆ ಮುಂಚೆ ನನ್ನ ತಾಯಿಯು ಉಪ ವಾಸ, ಪ್ರಾರ್ಥನೆ ಮುಂತಾದ ನೂರಾರು ವ್ರತಗಳನ್ನು ಆಚರಿ ಸುತ್ತಿದ್ದದ್ದು ನನಗೆ ಗೊತ್ತು. ನಾನು ಐದು ನಿಮಿಷಗಳೂ ಕೂಡ



ಭುವನೇಶ್ವರೀ ದೇವಿ, ಸ್ವಾಮಿ ವಿವೇಕಾನಂದರ ತಾಯಿ

ಅವುಗಳನ್ನು ಮಾಡಲಾರೆ. ಅವಳು ಎರಡು ವರ್ಷಗಳು ಅವನ್ನು ಆಚರಿಸಿದಳು. ನನ್ನಲ್ಲಿರುವ ಧಾರ್ಮಿಕ ಸಂಸ್ಕೃತಿಯೆಲ್ಲವೂ ಬಂದಿರುವುದು ಅವಳಿಂದ. ಪ್ರಜ್ಞಾಪೂರ್ವಕವಾಗಿ ನನ್ನನ್ನು ಈ ರೀತಿ ರೂಪಿಸಿದವಳೇ ನನ್ನ ತಾಯಿ. ನನ್ನಲ್ಲಿರುವ ಸತ್‌ಪ್ರವೃತ್ತಿ ಯೆಲ್ಲವನ್ನೂ ಯಾಂತ್ರಿಕವಾಗಿಯಲ್ಲ — ಪ್ರಜ್ಞಾಪೂರ್ವಕವಾಗಿ ತಾಯಿಯೇ ನನಗೆ ನೀಡಿರುವುದು. ಆಕೆಯ ಋಣವನ್ನು ನಾನೆಂದಿಗೂ ತೀರಿಸಲಾರೆ.''

ಮುಂದುವರಿಸುತ್ತಾ ಸ್ವಾಮೀಜಿ, ''ಭೌತಿಕವಾಗಿ ಹುಟ್ಟಿದ ಮಗು ಆರ್ಯನಲ್ಲ; ಆಧ್ಯಾತ್ಮಿಕವಾಗಿ ಹುಟ್ಟಿದ ಮಗುವೇ ಆರ್ಯ. ನಾವು ಹುಡುಗರಾಗಿದ್ದಾಗ ಪ್ರತಿದಿನ ಬೆಳಿಗ್ಗೆ ಒಂದು ಬಟ್ಟಲು ನೀರನ್ನು ತಾಯಿಯ ಹತ್ತಿರ ತೆಗೆದುಕೊಂಡು ಹೋಗು ತ್ತಿದ್ದೆವು. ಅವಳು ತನ್ನ ಕಾಲಿನ ಹೆಬ್ಬೆಟ್ಟನ್ನು ಅದರಲ್ಲಿ ಅದ್ದಿದ ಮೇಲೆ ನಾವು ಅದನ್ನು ಕುಡಿಯುತ್ತಿದ್ದೆವು.'' *(ಸ್ವಾಮಿ ವಿವೇಕಾ ನಂದರ ಕೃತಿಶ್ರೇಣಿ, ಸಂ.೯, ಪು. ೨೩೮-೨೩೯)*

ಶಂಕರಾಚಾರ್ಯರು ಸಂನ್ಯಾಸಿಗಳಾದರೂ ಮಾತೃತ್ವದ ಹಿರಿ ಮೆಯ ಸಂದೇಶವನ್ನು ಜಗತ್ತಿಗೆ ಸಾರಲೆಂದೋ ಏನೋ ತಮ್ಮ ಹೆತ್ತತಾಯಿಯ ಮರಣಶಯ್ಯೆಯಲ್ಲಿ 'ಮಾತೃಪಂಚಕಮ್' ರಚಿಸಿದರು. ಇದನ್ನು ಓದಿದವರ ಕಣ್ಮುಂದೆ ಕಣ್ತುಂಬಿ ತಾಯಿಯ ಬಳಿ ನಿಂತ ಶಂಕರರ ಚಿತ್ರ ಮೂಡುವುದು. '**ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ**' *(ದೇವ್ಯಪರಾಧಕ್ಷಮಾಪನಸ್ತೋತ್ರ)* ಎನ್ನುವ ಶ್ರೀಶಂಕರರ ತಾಯ ಪ್ರೇಮವು ಅಸಾಧಾರಣವಾದುದು. ಮಕ್ಕಳಿಗಾಗಿ ಇಪ್ಪತ್ತು ವೇಳೆಯಾದರೂ ತನ್ನ ಜೀವನ ತೆರಲು ಸಿದ್ಧಳಾಗಿರುವಳು ಆ ತಾಯಿ. ಆಕೆಯಲ್ಲಿನ ಕ್ಷಮಾಗುಣವನ್ನು ಭೂತಾಯಿಗೆ ಹೋಲಿಸುವುದುಂಟು. ಮಕ್ಕಳು ಎಷ್ಟು ಪಾಪಿಗಳಾ ದರೂ, ದುರಾತ್ಮರಾದರೂ ತಾಯ ಪ್ರೇಮ ಚಿಲುಮೆ ಎಂದಿಗೂ ಬತ್ತದು. 'ಆಕೆ ಮಗುವಿಗೆ ಶಾಪ ಕೊಡುವುದನ್ನು ನಾವು ಕೇಳಿಲ್ಲ' ಎನ್ನುತ್ತಾರೆ ಜ್ಞಾನಿಗಳು.

ಪೋಷಕರು, ಅದರಲ್ಲೂ ತಾಯಿ ಮಕ್ಕಳ ಮೇಲೆ ಬೀರುವ ಪ್ರಭಾವವನ್ನು ಬದಲಾಯಿಸಲಾಗದು. ನೈತಿಕತೆ, ಶೀಲ ತಂದೆ ತಾಯಿಗಳಿಂದ ಬರುವುದು. 'ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಸ್ತ್ರೀ ಇದ್ದಾಳೆ' ಎಂಬ ಹೇಳಿಕೆಯನ್ನು ಮುಂದು ವರೆಸುತ್ತಾ, 'ಪ್ರತಿಯೊಬ್ಬ ಶ್ರೇಷ್ಠ ವ್ಯಕ್ತಿಯ ಹಿಂದೆ ಒಬ್ಬ ತಾಯಿ ಇದ್ದಾಳೆ' ಎಂಬುದು ಸಾರ್ವಕಾಲಿಕ ಸತ್ಯ.

ವಿಜಯನಗರ ಅರಸರ ವೈಭವದ ಗಾಥೆ ಒಂದು ಇತಿಹಾಸವೇ ಸರಿ. ಅಲ್ಲಿ ದೊರೆತ ಒಂದು ಶಿಲಾಶಾಸನದಲ್ಲಿ ಸ್ವಾರಸ್ಯಕರ ಸಂಗತಿಯೊಂದು ಬೆಳಕಿಗೆ ಬಂದಿದೆ. ವಿಜಯನಗರ ಆಸ್ಥಾನದಲ್ಲಿ ಶ್ರೇಷ್ಠನೂ, ಪ್ರಸಿದ್ಧನೂ ಆದ ಲಕ್ಷ್ಮೀಧರರೆಂಬ ಅಮಾತ್ಯನಿದ್ದನು. ದೈವಭಕ್ತಳೂ, ಸದ್ಗುಣಸಂಪನ್ನಳೂ ಆದ ಅವರ ತಾಯಿ ಮಗನು ಆಟವಾಡುತ್ತಿದ್ದಾಗ ದಿನವೂ ಅವನನ್ನು ಕುರಿತು, ''ನೀನು ಕೆರೆ ಕಟ್ಟಿಸು, ಬಾವಿ ತೋಡಿಸು, ದೇವಾಲಯವನ್ನ ಮಾಡಿಸು, ಅನಾ ಥರ ರಕ್ಷಣೆ ಮಾಡು, ಮಿತ್ರರಿಗೆ ನೆರವಾಗು, ನಂಬಿದವರ ಕೈ ಬಿಡ ಬೇಡ, ಶಿಷ್ಯರನ್ನು ಸಲಹು'' ಎಂದು ಸದಾ ಹೇಳುತ್ತಿದ್ದರಂತೆ. ಕಾಲ ಉರುಳಿದಂತೆ ಬೆಳೆದು ನಿಂತ ಈ ಮಗ ಆ ಸೊಗಸಾದ ನುಡಿಗಳನ್ನೆಲ್ಲಾ ಜೀವನದಲ್ಲಿ ಅಕ್ಷರಶಃ ಪಾಲಿಸಿದನಂತೆ! ಗರ್ಭ ಧರಿಸಿದಂದಿನಿಂದಲೇ ತಾಯಿ ಮಗುವಿನ ಶೀಲವನ್ನು ರೂಪಿಸ ತೊಡಗುವಳು. ತಾಯಿಯ ನಡೆ, ನುಡಿ, ಆಚಾರ, ವಿಚಾರ, ಆಲೋಚನೆಗಳೆಲ್ಲವೂ ಮಗುವಿನ ಶೀಲದ ಮೇಲೆ ಅತ್ಯದ್ಭುತ ಪ್ರಭಾವ ಬೀರುವುದು.

ಹಿಂದೆ ಮದಾಲಸ ಎಂಬ ಒಬ್ಬ ರಾಣಿ ಇದ್ದಳು. ಈ ಜನ್ಮ ದಲ್ಲಿಯೇ ತನ್ನ ಮಕ್ಕಳೆಲ್ಲರೂ ಮುಕ್ತಿಯನ್ನು ಪಡೆಯಬೇಕೆಂದು ಆಶಿಸಿದಳು. ಅದಕ್ಕೆ ಮಕ್ಕಳ ಮೇಲ್ವಿಚಾರಣೆಯನ್ನೆಲ್ಲಾ ತಾನೇ ವಹಿಸಿಕೊಂಡಳು. ಆ ಮಕ್ಕಳನ್ನು ತೊಟ್ಟಿಲಲ್ಲಿ ಇಟ್ಟು ತೂಗುವಾಗ 'ತತ್ತ್ವಮಸಿ, ತತ್ತ್ವಮಸಿ, ನೀನು ಪರಿಶುದ್ಧಾತ್ಮ, ಕಳಂಕರಹಿತ,

ಪಾಪದೂರ, ಶಕ್ತಿಶಾಲಿ, ಪರಮಶ್ರೇಷ್ಠ' ಎಂದು ಹಾಡುತ್ತಿದ್ದಳು. ಅದರಲ್ಲಿ ಮೊದಲ ಮೂರು ಮಕ್ಕಳೂ ಸಂನ್ಯಾಸಿಗಳಾದರು. ಆದರೆ ನಾಲ್ಕನೆಯವನನ್ನು ರಾಜನನ್ನಾಗಿ ಮಾಡುವುದಕ್ಕೆ ತಂದೆ ಆ ಮಗುವನ್ನು ಬೇರೆಡೆ ಕರೆದೊಯ್ದು ಬೆಳೆಸಿದನು. ಆ ಮಗು ಮನೆಬಿಟ್ಟು ಹೋಗುವಾಗ ತಾಯಿ ಒಂದು ಚೀಟಿಯನ್ನು ಅದರ ಕೈಯಲ್ಲಿಟ್ಟು, ''ನೀನು ದೊಡ್ಡವನಾದ ಮೇಲೆ ಇದನ್ನು ನೋಡು'' ಎಂದು ಹೇಳಿದಳು. ಆ ಪತ್ರದಲ್ಲಿ, 'ದೇವರೊಬ್ಬನೇ ಸತ್ಯ, ಉಳಿದವುಗಳೆಲ್ಲಾ ಮಿಥ್ಯೆ. ಆತ್ಮ ಯಾವುದನ್ನೂ ಕೊಲ್ಲುವುದಿಲ್ಲ, ಕೊಲ್ಲಿಸಿಕೊಳ್ಳುವುದೂ ಇಲ್ಲ. ಏಕಾಂಗಿಯಾಗಿರು ಅಥವಾ ಸಾಧು ಸಂಗದಲ್ಲಿರು' ಎಂದು ಬರೆದಿತ್ತು. ಮುಂದೊಂದು ದಿನ ರಾಜ ಕುಮಾರ ಇದನ್ನು ಓದಿ, ತಾನೂ ಕೂಡ ಪ್ರಪಂಚ ತ್ಯಜಿಸಿ ಸಂನ್ಯಾಸಿಯಾದನು.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ. ಸಂ.೧, ಪು. ೩೩೯)*

ಸ್ವಾಮಿ ವಿವೇಕಾನಂದರು ಮದಾಲಸಳ ಕುರಿತು ಮಾತನಾಡುವಾಗಲೆಲ್ಲಾ ಭಾವಪರಪಶರಾಗುತ್ತಿದ್ದರು. ಇಂತಹ ಇನ್ನು ಅನೇಕಾನೇಕ ಆದರ್ಶ ತಾಯಂದಿರು, ಮಹಿಳೆಯರು, ಶ್ರೇಷ್ಠ ಸಮಾಜವನ್ನು ರೂಪಿಸುವಲ್ಲಿ ನೀಡಿದ ಕೊಡುಗೆ ಅಪಾರ ಎಂದು ಇತಿಹಾಸದ ಪುಟಗಳನ್ನು ತಿರುವಿಹಾಕಿದರೆ ತಿಳಿಯುವುದು. ಸ್ತ್ರೀ ಶಕ್ತಿಯೂ ಹೌದು, ವಿಧ್ವಂಸಕಳೂ ಹೌದು.

ಮನಶ್ಶಾಸ್ತ್ರಜ್ಞನಾದ ಸಿ. ಇ. ಬಾರ್ಕರ್ ಹೀಗೆನ್ನುತ್ತಾರೆ: ''ತಾಯಂದಿರಿಗೆ, ಒಮ್ಮೆ ಅರಿವಾದಲ್ಲಿ, ಪ್ರಪಂಚವನ್ನು ಸುಸ್ಥಿತಿಗೆ ತರುವ ಕೀಲಿಕೈ ಅವರ ಬಳಿಯಿದೆ. ಶಾಂತಿ ಮತ್ತು ಸ್ಥಿರತೆಗಾಗಿ ಕಾರ್ಯೋನ್ಮುಖವಾಗುವಂತಹ ನಾಗರಿಕರನ್ನು ನಿರ್ಮಿಸುವ ನಂಬಲಸಾಧ್ಯವಾದ ಒಂದು ಕೊಡುಗೆ ನೀಡುವ ಶಕ್ತಿ 'ಒಳ್ಳೆಯ ತಾಯ್ತನದ ಪೀಳಿಗೆಗೆ ಇದೆ.''



ಅದೇ ಸ್ತ್ರೀಯ ವಿಧ್ವಂಸಕ ಮುಖವನ್ನು ಕುರಿತು ಎಲ್ಲಾ –ವೀಲ್ಲರ್ ವಿಲಕಾಕ್ಸ್ ತಮ್ಮ 'New Thought Common Sense' ಎನ್ನುವ ಪುಸ್ತಕದಲ್ಲಿ ಹೀಗೆಂದು ಎಚ್ಚರಿಸುತ್ತಾರೆ: ''ಯಾವ ಸ್ತ್ರೀ ಕೆಟ್ಟ ಮತ್ತು ಅಪ್ರಾಮಾಣಿಕ ವಿಷಯಗಳಲ್ಲಿ ಮನಸ್ಸನ್ನು ನೆಟ್ಟಿರುವವಳೋ, ಆಕೆ ನಾಲ್ಕು ಪೀಳಿಗೆಯೊಳಗೆ ಇನ್ನೂರು ಜನ ಅಪರಾಧಿಗಳನ್ನು ಈ ಪ್ರಪಂಚಕ್ಕೆ ಕಳುಹಿಸುವಳು.''

## ಸಂಸಾರಿಗಳ ಕರ್ತವ್ಯ

''ಸಂಸಾರಿಗಳಿಗೆ ದುಡ್ಡಿನ ಆವಶ್ಯಕತೆ ಇದೆ; ಏಕೆಂದರೆ ಆತನಿಗೆ ಹೆಂಡತಿ ಮಕ್ಕಳಿದ್ದಾರೆ. ಅವರ ಪೋಷಣೆಗಾಗಿ ಆತ ದುಡ್ಡು ಕೂಡಿಡಬೇಕಾಗುತ್ತದೆ. ಕೇವಲ ಸಂನ್ಯಾಸಿ ಮತ್ತು ಹಕ್ಕಿ ಕೂಡಿಡುವುದಿಲ್ಲ. ಆದರೆ ಹಕ್ಕಿಗೆ ಮರಿ ಆದಾಗ ಅವಕ್ಕೆ ಅದು ಕೊಕ್ಕಿನಲ್ಲಿ ಆಹಾರ ಶೇಖರಿಸಿಕೊಂಡು ತರುತ್ತದೆ; ಆಗ ಅದೂ ಸಂಚಯಮಾಡಬೇಕಾಗುತ್ತದೆ. ಪರಿವಾರದ ರಕ್ಷಣೆ ಮಾಡಬೇಕಾಗಿರುವುದರಿಂದ ಸಂಸಾರಿಗೆ ದುಡ್ಡಿನ ಆವಶ್ಯಕತೆ ಇದೆ.

''ಸಂಸಾರಿ ನಿಜವಾದ ಭಕ್ತನಾದರೆ ಆತ ಅನಾಸಕ್ತನಾಗಿ ತನ್ನ ಕೆಲಸಕಾರ್ಯಗಳನ್ನು ಮಾಡುತ್ತಾನೆ. ತನ್ನ ಕರ್ಮದ ಫಲ ಲಾಭದಾಯಕವಾಗಿದ್ದರೂ ಸರಿಯೆ ನಷ್ಟದಾಯಕವಾಗಿದ್ದರೂ ಸರಿಯೆ, ಸುಖದಾಯಕವಾಗಿದ್ದರೂ ಸರಿಯೆ, ದುಃಖದಾಯಕವಾಗಿದ್ದರೂ ಸರಿಯೆ ಎಲ್ಲವನ್ನೂ ಭಗವಂತನಿಗೆ ಅರ್ಪಿಸಿಬಿಡುತ್ತಾನೆ. ಹಗಲಿರುಳು ಭಕ್ತಿಗಾಗಿ ಪ್ರಾರ್ಥನೆ ಮಾಡುತ್ತಾನೆ, ಮತ್ತೆ ಬೇರೆ ಯಾವುದಕ್ಕೂ ಪ್ರಾರ್ಥನೆ ಮಾಡುವುದಿಲ್ಲ. ಇದಕ್ಕೆ 'ನಿಷ್ಕಾಮಕರ್ಮ' ಅಂತ ಹೆಸರು. ಅಂದರೆ ಅನಾಸಕ್ತಿಯಿಂದ ಕೆಲಸ ಮಾಡುವುದು.

ಸಂಸಾರಿ ನಿಷ್ಕಾಮ ಭಾವನೆಯಿಂದ ಯಾರಿಗಾದರೂ ದಾನ ಮಾಡಿದರೆ ಅದು ತನ್ನ ಉಪಕಾರಕ್ಕಾಗಿಯೇ ವಿನಾ ಪರರ ಉಪಕಾರಕ್ಕಲ್ಲ. ಸರ್ವಭೂತಗಳಲ್ಲಿಯೂ ಭಗವಂತನು ಇರುವುದರಿಂದ ಆತನ ಸೇವೆಮಾಡಿದಂತೆಯೇ ಆಗುತ್ತದೆ.

*(ಶ್ರೀರಾಮಕೃಷ್ಣ ವಚನವೇದ, ಸಂ.೨, ಪು.೧೭೧)*